ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,,
ಕನಕಪುರ

ಸಿ.ಸಿ ನಂ.**63/2013**

| | | | |
|---|---|---|---|
| **ಚಾಸಾ ಃ** | **6** | **ಪ್ರಾಸಾಃ-** | **3** |

ಹೆಸರು ಡಾ, ಶೈಲೇಶ್ ಕುಮಾರ್

ತಂದೆಯ ಹೆಸರು ಬಿ.ಎನ್ ನಂಜಪ್ಪ

ವಯಸ್ಸು 63

ಉದ್ಯೋಗ ನಿವೃತ್ತ ವೈದ್ಯಾಧಿಕಾರಿಗಳು

ವಿಳಾಸ ಬೆಂಗಳೂರು

- - - - - - - - - - - - - - - - - - - - - - - - - - - - - - - - -

**ದಿಃ08.11.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ನ್ಯಾಯಾಲಯದ ಮುಂದೆ ಈ ದಿನ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ.

**೨೦೦೭** ರಿಂದ **೨೦೧೪** ರ ವರೆಗೆ ನಾನು ಕನಕಪುರದ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳೆಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.**೧೬.೦೧.೨೦೧೨** ರಂದು ನಾನು ಕರ್ತವ್ಯದಲ್ಲಿದ್ದಾಗ ದಿನಾಂಕ.**೧೫.೦೧.೨೦೧೨** ರಂದು ವೀಣಾ ಮತ್ತು ಕೆ.ವಿ ವೆಂಕಟೇಶ್ ರವರು ದೈಹಿಕವಾಗಿ ಹಲ್ಲೆ ಮಾಡಿರುತ್ತಾರೆಂದು ಕನಕಪುರದ ವಾಸಿ ಡಿ.ಎನ್ ಶ್ರುತಿ ಎನ್ನುವವರು ಚಿಕಿತ್ಸೆಗಾಗಿ ಕನಕಪುರ ಸರ್ಕಾರಿ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಿದಾಗ ಅವರ ಬಲ ಕೆನ್ನೆಯ ಮೇಲೆ ಭಾವು **೭** ಇಂಟು **೧/೪** ಬಂದ ಗಾಯಗಳು, **೬** ಇಂಟು **೧/೪** **೫** ಇಂಟು **೧/೪**

ಮೂರು ಗಾಯಗಳು ಕಂಡುಬಂದಿರುತ್ತದೆ. ಬಲಕಿವಿಯಿಂದ ರಕ್ತಸ್ರಾವಾವಾಗಿರುವ ಗಾಯವಾಗಿರುತ್ತದೆ ಎಂದು ಹೇಳಿದ್ದು, ಸದರಿ ಗಾಯವನ್ನು ಪರೀಕ್ಷಿಸಲಾಗಿ ಯಾವುದೇ ರಕ್ತಸ್ರಾವಾ ಕಂಡುಬಂದಿರುವುದಿಲ್ಲ. ಸದರಿ ವಿಚಾರದ ಬಗ್ಗೆ ಟಿ.ಎನ್.ಟಿ ವೈದ್ಯಾಧಿಕಾರಿಗಳಿಂದ ಅಭಿಪ್ರಾಯ ಪಡೆದುಕೊಳ್ಳಲಾಗಿ ಸದರಿ ವರದಿಯಲ್ಲಿ ಯಾವುದೇ ತೊಂದರೆ ಇರುವುದಿಲ್ಲ ಎಂದು ಬಂದಿರುತ್ತದೆ. ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-೩, ಸಾಕ್ಷಿಯ ಸಹಿಯನ್ನು ನಿಪಿ-೩(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಎಸ್.ಪಿ.ಕೆ ಆರೋಪಿ ಪರ ವಕೀಲರಿಂದಃ-**

ಆ ದಿನ ನನ್ನನ್ನು ಹೊರತುಪಡಿಸಿ ಬೇರೆ ಯಾರು ವೈದ್ಯರು ಕರ್ತವ್ಯದಲ್ಲಿರುವುದಿಲ್ಲ. ನಿಪಿ-3 ರಲ್ಲಿ ಗಾಯದ ವಯಸ್ಸನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಗಾಯವಾದ ನಂತರ ಅರ್ಧ ಗಂಟೆಯ ಒಳಗೆ ರಕ್ತಹೆಪ್ಪುಗಟ್ಟುತ್ತದೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಹೊರಟಾದ ಸ್ಥಳದಲ್ಲಿ ಎಡವಿ ಬಿದ್ದಾಗ ನಿಪಿ-3 ರಲ್ಲಿ ತೋರಿಸಿರುವ ಗಾಯಗಳು ಆಗುತ್ತವೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ನಿಪಿ-3 ನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸರಿ ಇದೆ,**

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**